**ದಿನಾಂಕ 28.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 1** ಎಂದು, ದೂರಿನ ದೃಢೀಕೃತ ಪ್ರತಿಯನ್ನು **ನಿಪಿ 2** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು **ನಿಪಿ 3** ಎಂದು, ಅಮಾನತ್ತು ಪಂಚನಾಮೆಯ ದೃಢೀಕೃತ ಪ್ರತಿಯನ್ನು **ನಿಪಿ 4** ಎಂದು, ನಕ್ಷೆಯ ದೃಢೀಕೃತ ಪ್ರತಿಯನ್ನು **ನಿಪಿ 5** ಎಂದು, ಐಎಮ್‌ವಿ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 6** ಎಂದು, ಶವ ತನಿಖಾ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 7** ಎಂದು, ಶವ ಪರೀಕ್ಷಾ ವರದಿಯ ದೃಢೀಕೃತ ಪ್ರತಿಯನ್ನು **ನಿಪಿ 8** ಎಂದು, ಮೋಟಾರು ವಾಹನ ಕಯ್ದೆಯ ಕಲಂ 133 ರಡಿ ನೀಡಿರುವ ನೋಟೀಸು ಮತ್ತು ಸದರಿ ನೋಟೀಸಿಗೆ ನೀಡಿರುವ ಉತ್ತರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ **ನಿಪಿ 9 ಮತ್ತು 10** ಎಂದು, ದೋಷಾರೋಪಣ ಪಟ್ಟಿಯ ದೃಢೀಕೃತ ಪ್ರತಿಯನ್ನು **ನಿಪಿ 11** ಎಂದು, ವೇತನ ಪಟ್ಟಿಗಳನ್ನು **ನಿಪಿ 12** ಎಂದು, ಅಕೌಂಟ್ ಸ್ಟೇಟ್ ಮೆಂಟಿನ ಧೃಡಿಕೃತ ಪ್ರತಿಯನ್ನು **ನಿಪಿ 13** ಎಂದು, ಗುರುತಿನ ಚೀಟಿ, ಪಾನ್ ಕಾರ್ಡುಗಳು ಮತ್ತು ಆಧಾರ್ ಕಾರ್ಡುಗಳ ನೋಟರಿ ಪ್ರತಿ(ಮೂಲ ದಾಖಲಾತಿಯೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲಾತಿಯನ್ನು ಹಿಂದಿರುಗಿಸಲಾಯಿತು)ಗಳನ್ನು ಕ್ರಮವಾಗಿ **ನಿಪಿ 14 ರಿಂದ 16** ಎಂದು ಗುರುತಿಸಲಾಯಿತು.

1ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

2ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**
**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**